**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸೇಶನ ಕೇಸ ನಂಃ 189/2019

ಪಿಡಬ್ಲು : 9 ಸಿಡಬ್ಲು : 8

| | |
|---|---|
| ಸಾಕ್ಷಿಯ ಹೆಸರು | : ಶ್ರೀ. ದಿಲೀಪ ಮೈಶಾಳೆ |
| ತಂದೆಯ ಹೆಸರು | : ಶ್ರೀ. ಮಾರುತಿ |
| ವಯಸ್ಸು | : 39 ವರ್ಷ |
| ಉದ್ಯೋಗ | : ಕೂಲಿ ಕೆಲಸ |
| ವಾಸ್ತವ್ಯ | : ನಿಪ್ಪಾಣಿ |
| ದಿನಾಂಕ | : 05-01-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

(3 ನೇಆರೋಪಿ ನ್ಯಾಯಾಂಗ ಬಂಧನದಲ್ಲಿದ್ದು ವಿಡಿಯೋ ಕಾನ್ಫರೆನ್ಸ ಮುಖಾಂತರ ಹಿಂಡಲಗಾ ಕಾರಾಗೃಹ, ಬೆಳಗಾವಿಯಿಂದ ವಿಚಾರಣೆಗೆ ಹಾಜರುಪಡಿಸಿಕೊಳ್ಳಲಾಯಿತು. 3ನೇ ಆರೋಪಿಗೆ ನ್ಯಾಯಾಲಯದ ಚಿತ್ರಣ ಸ್ಪಷ್ಟವಾಗಿ ಕಾಣಿಸುತ್ತಿದೆಯೇ ಮತ್ತು ಧ್ವನಿ ಸ್ಪಷ್ಟವಾಗಿ ಕೇಳಿಸುತ್ತಿದೆಯೇ ಎಂದು ಆರೋಪಿಯಿಂದ ಖಾತರಿಪಡಿಸಿಕೊಂಡು ವಿಚಾರಣೆಯನ್ನು ವಿಡಿಯೋ ಕಾನ್ಫರೆನ್ಸ ಮುಖಾಂತರ ಆರೋಪಿ ಪರ ವಕೀಲರ ಮತ್ತು ಸರ್ಕಾರಿ ವಕೀಲರ ಸಮಕ್ಷಮ ತೆರೆದ ನ್ಯಾಯಾಲಯದಲ್ಲಿ ತೆಗೆದುಕೊಳ್ಳಲಾಯಿತು.)

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಚಾಸಾಃ 9 ಅರ್ಜುನ ವಿಜಯ ಹೆಗಡೆ ನನಗೆ ಗೊತ್ತಿರುತ್ತಾರೆ. ನಿಪ್ಪಾಣಿ ಪೋಲಿಸರು ಪಂಚನಾಮೆ ಮಾಡುವ ಸಲುವಾಗಿ ಬಸವೇಶ್ವರ ಚೌಕ ಪೋಲಿಸ ಠಾಣೆಗೆ ಈಗ 5-6 ವರ್ಷಗಳ ಹಿಂದೆ ಕರೆಸಿದ್ದರು. ನಾನು ಕೆಲಸಕ್ಕೆ ಹೋಗುತ್ತಿದ್ದಾಗ ಪೋಲಿಸರು ನನ್ನನ್ನು ಕರೆಸಿದ್ದರು. ನಾನು ಠಾಣೆಗೆ ಹೋಗಿದ್ದೇನು. ಪೋಲಿಸರು ನನ್ನನ್ನು ಗಾಡಿಯಲ್ಲಿ ಕೂರಿಸಿಕೊಂಡು ಸಮಾಧಿಮಠಕ್ಕೆ ಕರೆದುಕೊಂಡು ಹೋಗಿದ್ದರು. ಆ ದಿನ ನನ್ನೊಂದಿಗೆ

ಅರ್ಜುನ ಅವರೂ ಸಹ ಇದ್ದರು. ನಾನು, ಅರ್ಜುನ, ಪೋಲಿಸರು ಜೀಪಿನಲ್ಲಿ ಇದ್ದೇವು ಬೇರೆಯವರು ಯಾರು ಇದ್ದರು ಎಂದು ನನಗೆ ನೆನಪಿರುವುದಿಲ್ಲ. ವಿಡಿಯೋ ಕಾನ್ಫರೆನ್ಸಿಂಗ ಮುಖಾಂತರ ಹಾಜರಾಗಿರುವ ಆರೋಪಿಯನ್ನು ಮತ್ತು ನ್ಯಾಯಾಲಯದಲ್ಲಿ ವಿಚಾರಣೆಗೆ ಹಾಜರಾಗಿರುವ ಆರೋಪಿತರನ್ನು ನಾನು ನೋಡಿರುವುದಿಲ್ಲ.

2. ಸಮಾಧಿಮಠದ ಬಳಿ ಪೋಲಿಸರು ಪೋಟೋ ತೆಗೆದರು. ಯಾವ ಕಾರಣಕ್ಕೆ ಪೋಟೋ ತೆಗೆದರು ಎಂದು ನನಗೆ ಗೊತ್ತಿಲ್ಲ. ಪೋಟೋ ತೆಗೆಯುವ ಸಮಯದಲ್ಲಿ ನಾನು, ಅರ್ಜುನ, ಪೋಲಿಸರು, 2-3 ಜನ ಹುಡುಗರು ಇದ್ದರು. ಆ ಹುಡುಗರೂ ಸಹ ನಾವು ಪೋಲಿಸರೊಂದಿಗೆ ಬಂದ ಗಾಡಿಯಲ್ಲಿಯೇ ಬಂದಿದ್ದರು. ಆ ಹುಡುಗರು ಯಾವ ಕಾರಣಕ್ಕೆ ಅಲ್ಲಿಗೆ ಬಂದಿದ್ದರು ಎಂದು ನನಗೆ ಗೊತ್ತಿಲ್ಲ.

3. ನಂತರ ಪೋಲಿಸರು ನಿಪ್ಪಾಣಿಯ ವಿದ್ಯಾ ಮಂದಿರದ ಹಿಂಭಾಗದಲ್ಲಿನ ಒಂದು ಹಳ್ಳದ ಬಳಿ ಪೋಲಿಸರು ಪೋಟೋ ತೆಗೆದರು. ಆ ಸ್ಥಳದಲ್ಲಿಯೂ ಸಹ ನಾನು ಅರ್ಜುನ, ಪೋಲಿಸರು, ಮೇಲೆ ಹೇಳಿದ ಹುಡುಗರು ಸಹ ಇದ್ದರು. ಆ ಹುಡುಗರು ಆ ಸ್ಥಳದಲ್ಲಿ ಪೋಲಿಸರಿಗೆ ಬಂಗಾರದ ಚೈನ ಮತ್ತು ಉಂಗುರವನ್ನು ನೀಡಿದರು. ಆ ಚೈನ ಮತ್ತು ಉಂಗುರ ಯಾರಿಗೆ ಸೇರಿದ್ದು ಮತ್ತು ಯಾವ ಕಾರಣಕ್ಕೆ ನೀಡಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

4. ಸಾಕ್ಷಿಗೆ ಮೂರು ಪೋಟೋಗಳನ್ನು ತೋರಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು, ಸಾಕ್ಷಿ ಅರ್ಜುನ ಅವರ ಇರುವಿಕೆಯನ್ನು, 1ನೇ ಆರೋಪಿ ಸತ್ಯಜಿತ ಅವರ ಇರುವಿಕೆಯನ್ನು ಗುರುತಿಸಿದ್ದಾರೆ. ಆ ಪೋಟೋಗಳನ್ನು ಬಿರುಬಾ ಮಾಳಾ ಅವರ ಮನೆಯ ಹತ್ತಿರ ತೆಗೆಯಲಾಗಿದೆ ಎಂದು ಹೇಳಿದ್ದಾರೆ. ಮೂರು ಪೋಟೋಗಳನ್ನು ಯಾವ ಸಂದರ್ಭದಲ್ಲಿ ತೆಗೆಯಲಾಯಿತು ಮತ್ತು ಪೋಟೋದಲ್ಲಿ ಕಾಣುವ ಮೋಟರಸೈಕಲನ್ನು ಯಾವ ಕಾರಣಕ್ಕೆ ತೋರಿಸಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ. ಪೋಟೋ ತೆಗೆದ ಸಮಯದಲ್ಲಿ ಯಾವುದಾದರೂ ವಸ್ತುಗಳನ್ನು ಪೋಲಿಸರು ಜಪ್ತು ಮಾಡಿದ ಬಗ್ಗೆ ನನಗೆ ನೆನಪಿರುವುದಿಲ್ಲ.

5. ಸಾಕ್ಷಿಗೆ ಒಂದು ಪೋಟೋವನ್ನು ತೋರಿಸಿದ್ದು ಅದನ್ನು ಸಮಾಧಿಮಠದ ಬಳಿ ತೆಗೆದ ಪೋಟೋ ಎಂದು ಗುರುತಿಸಿದ್ದಾರೆ. ಅದರಲ್ಲಿ 1ನೇ ಆರೋಪಿಯ ಇರುವಿಕೆಯನ್ನು, ತಮ್ಮ ಹಾಗೂ ಅರ್ಜುನ ಮತ್ತು ಪೋಲಿಸರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋದಲ್ಲಿ ಕಾಣುವ ಇನ್ನಿಬ್ಬರು ಹುಡುಗರು ಗುರುತು ಸಿಗುತ್ತಿಲ್ಲ ಎಂದು ಹೇಳಿದ್ದಾರೆ. ಆ ಪೋಟೋವನ್ನು ಹುಡುಗರು ಬಂಗಾರ ನೀಡುವ ಸಮಯದಲ್ಲಿ ತೆಗೆಯಲಾಗಿದೆ ಎಂದು ಹೇಳಿದ್ದಾರೆ. ಬಂಗಾರ ನೀಡುತ್ತಿರುವ ವ್ಯಕ್ತಿ ಯಾರು ಎಂದು ನನಗೆ ಹೇಳಲು ಆಗುತ್ತಿಲ್ಲ. ಪೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅವುಗಳನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರಿಂದ ಪೋಟೋಗಳನ್ನು ಕ್ರಮವಾಗಿ ನಿಪಿ–34 ಮತ್ತು ನಿಪಿ–35 ಎಂದು ಗುರುತಿಸಲಾಯಿತು. ಆ ಬಂಗಾರವನ್ನು ಪೋಲಿಸರು ಏನು ಮಾಡಿದರು ಎಂದು ನನಗೆ ಗೊತ್ತಿರುವುದಿಲ್ಲ.

6. ಸಮಾಧಿಮಠದ ಬಳಿ ತೆಗೆಯಲಾದ ಪೋಟೋ ಎಂದು ಸಾಕ್ಷಿ ಒಂದು ಪೋಟೋವನ್ನು ನೋಡಿ ಅದರಲ್ಲಿ ತಮ್ಮ ಇರುವಿಕೆಯನ್ನು, 1ನೇ ಆರೋಪಿ , ಸಾಕ್ಷಿ ಅರ್ಜುನ ಮತ್ತು ಪೋಲಿಸರ ಇರುವಿಕೆಯನ್ನು ಗುರುತಿಸಿದ್ದಾರೆ. ಪೋಟೋವನ್ನು ನಿಪಿ–36 ಎಂದು ಗುರುತಿಸಲಾಯಿತು.

7. ಬಿರುಬಾ ಮಾಳಾ ಅವರ ಮನೆಯ ಹತ್ತಿರ ತೆಗೆಯಲಾದ ಪೋಟೋಗಳನ್ನು ಸಾಕ್ಷಿ ಗುರುತಿಸಿದ್ದಾರೆ. ಪೋಟೋಗಳನ್ನು ಕ್ರಮವಾಗಿ ನಿಪಿ–37, ನಿಪಿ–38 ಮತ್ತು ನಿಪಿ–39 ಎಂದು ಗುರುತಿಸಲಾಯಿತು. ಆ ದಿನ ಪೋಲಿಸರು ನನ್ನ 5–6 ಸಹಿಗಳನ್ನು ಪೋಲಿಸ ಠಾಣೆಯಲ್ಲಿ ಪಡೆದುಕೊಂಡಿದ್ದಾರೆ. ಠಾಣೆಯಲ್ಲಿ ಹೊರತುಪಡಿಸಿ ಬೇರೆ ಸ್ಥಳಗಳಲ್ಲಿ ಪೋಲಿಸರು ನನ್ನ ಸಹಿ ಮಾಡಿಸಿಕೊಂಡಿರುವುದಿಲ್ಲ. ಠಾಣೆಯಲ್ಲಿ ಪೋಲಿಸರು ನನಗೆ ಯಾವುದಾದರೂ ವಸ್ತುಗಳನ್ನು ತೋರಿಸಿದ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ. ನಾನು ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ.

8. ಸಾಕ್ಷಿಗೆ ಒಂದು ದಾಖಲೆ ತೋರಿಸಿದ್ದು ಅದರಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿದ್ದಾರೆ. ಆ ದಾಖಲೆಯು ಮೃತನ ಮೈಮೇಲಿನ ರಕ್ತ ಹತ್ತಿದ ಬಟ್ಟೆ ಜಪ್ತು ಪಂಚನಾಮೆ ಆಗಿರುತ್ತದೆ. ಅದನ್ನು ನಿಪಿ–40 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–40 [ಎ] ಎಂದು ಗುರುತಿಸಲಾಯಿತು. ಸಾಕ್ಷಿಗೆ ಐದು ದಾಖಲೆಗಳನ್ನು ತೋರಿಸಿದ್ದು ಅವುಗಳಲ್ಲಿ ತಮ್ಮ ಸಹಿ ಇರುವುದಾಗಿ ಗುರುತಿಸಿದ್ದಾರೆ. ಈ ಐದು ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿರುವುದಿಲ್ಲ.

**[ ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿಯು ಪಂಚ ಸಾಕ್ಷಿದಾರರಾಗಿದ್ದು 5 ಪಂಚನಾಮೆಗಳ ಮೇಲೆ ತಮ್ಮ ಸಹಿಯನ್ನು ಗುರುತಿಸಿದ್ದು, ಪಂಚನಾಮೆಗೆ ವ್ಯತಿರೀಕ್ತವಾಗಿ ಹೇಳಿಕೆ ನೀಡಿದ್ದರಿಂದ ಅಭಿಯೋಜಕರಿಗೆ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು]**

**ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ಪೋಲಿಸ ನೋಟಿಸಿನ ಮೇಲೆ ಸಾಕ್ಷಿಯು ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪೋಲಿಸ ನೋಟಿಸನ್ನು ನಿಪಿ–41 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–41 [ಎ] ಎಂದು ಗುರುತಿಸಲಾಯಿತು. ಪೋಲಿಸರು ನೀಡಿದ ನೋಟಿಸಿನ ಮೇರೆಗೆ ನಾನು ಪೋಲಿಸ ಠಾಣೆಗೆ ಹೋಗಿದ್ದೇನು ಎನ್ನುವುದು ಸರಿ.

2. ದಿನಾಂಕಃ 02–04–2019 ರಂದು ನಾನು ಮೊದಲನೇ ಬಾರಿ ಪೋಲಿಸ ಠಾಣೆಗೆ ರಾತ್ರಿ 08:45 ರ ಸಮಯಕ್ಕೆ ಹೋಗಿರುತ್ತೇನೆ ಎನ್ನುವುದು ಸರಿ. ಪೋಲಿಸ ಠಾಣೆಯಲ್ಲಿ ಪೋಲಿಸರು ಮೃತ ಅರವಿಂದ ಪೋಳ ಅವರ ಶವದ ಮೈಮೇಲೆ ಇದ್ದ ಬಿಳಿ ಮಿಶ್ರಿತ ಖಾಕಿ

ಬಣ್ಣದ ಪ್ಯಾಂಟ್ ನ್ನು ಮರಣೋತ್ತರ ಪರೀಕ್ಷೆಯ ಸಮಯದಲ್ಲಿ ವೈದ್ಯರು ಸಂಗ್ರಹಿಸಿ ಪೋಲಿಸರಿಗೆ ನೀಡಿದ್ದು, ಅದನ್ನು ಪೋಲಿಸರು ಪೋಲಿಸ ಠಾಣೆಯಲ್ಲಿ ನನಗೆ ತೋರಿಸಿ ಅದರ ಮೇಲೆ ನಾನು ಸಹಿ ಮಾಡಿದ್ದ ಸಹಿಯನ್ನು ಅಂಟಿಸಿದ್ದರು ಎಂದು ಈಗ ನನಗೆ ನೆನಪಿಲ್ಲ. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಆ ಕಾರಣ ಪಂಚನಾಮೆಯನ್ನು ನಿಪಿ–40 ಎಂದು ಗುರುತಿಸಲಾಗಿದೆ. ನಾನು ನಿಪಿ–40 ರಲ್ಲಿರುವ ವಿಚಾರಗಳನ್ನು ತಿಳಿದುಕೊಂಡು ನಿಪಿ–40 [ಎ] ಪ್ರಕಾರ ಸಹಿ ಮಾಡಿರುತ್ತೇನೆ ಎನ್ನುವುದು ಸರಿಯಲ್ಲ.

3. ದಿನಾಂಕಃ 03–04–2019 ರ ಪೋಲಿಸ ನೋಟಿಸಿನ ಮೇಲೆ ಸಾಕ್ಷಿಯ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ನೋಟಿಸನ್ನು ನಿಪಿ–42 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–42 [ಎ] ಎಂದು ಗುರುತಿಸಲಾಯಿತು. ನೋಟಿಸ ನೀಡಿದ ಮರುದಿನ ಪೋಲಿಸ ಠಾಣೆಗೆ ಹೋಗಿದ್ದೇನು ಎನ್ನುವುದು ಸರಿ.

4. ನಾನು ಠಾಣೆಯಲ್ಲಿದ್ದಾಗ RFSL ನ ಅಧಿಕಾರಿಗಳು ಕಾರಿನಲ್ಲಿ ಶವ ಸಾಗಿಸುವಾಗ ಬಿದ್ದಿದ್ದ ರಕ್ತವನ್ನು ಹತ್ತಿಯಲ್ಲಿ ಸಂಗ್ರಹಿಸಿಕೊಂಡು ಬಂದು ಪೋಲಿಸರ ಮುಂದೆ ಹಾಜರುಮಾಡಿದ್ದು, ಪೋಲಿಸರು ಅದನ್ನು ನನ್ನ ಸಮಕ್ಷಮ ಜಪ್ತು ಮಾಡಿದರು ಎನ್ನುವುದು ಸರಿಯಲ್ಲ. ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಮೃತನ ಶವವನ್ನು ಸಾಗಿಸಲು ಬಳಸಿದ ಮಾರುತಿ ಸುಜುಕಿ ಶಿಫ್ಟ ಡಿಸೈರ ಕಾರ ಡಿಕ್ಕಿಯಲ್ಲಿ ಇದ್ದ ರಕ್ತದ ಜಪ್ತು ಪಂಚನಾಮೆಯನ್ನು ನಿಪಿ–43 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–43 [ಎ] ಎಂದು ಗುರುತಿಸಲಾಯಿತು.

5. ನಾನು ಠಾಣೆಗೆ ಹೋಗಿದ್ದಾಗ 1ನೇ ಆರೋಪಿ ಠಾಣೆಯಲ್ಲಿದ್ದನು ಎನ್ನುವುದು ಈಗ ನನಗೆ ನೆನಪಿಲ್ಲ. 1ನೇ ಆರೋಪಿ ಮೃತ ಅರವಿಂದ ಪೋಳ ಅವರನ್ನು ಕೊಲೆ ಮಾಡುವ

ಸಮಯದಲ್ಲಿ ತಮ್ಮ ಬಟ್ಟೆರಕ್ತ ಆಗಿದ್ದು, ಅದನ್ನು ತಾನು ಹಾಜರುಮಾಡುತ್ತೇನೆ ಎಂದು 1ನೇ ಆರೋಪಿ ನನ್ನ ಸಮಕ್ಷಮ ಹೇಳಿರುವುದು ಈಗ ನನಗೆ ನೆನಪಿರುವುದಿಲ್ಲ. 1ನೇ ಆರೋಪಿ ಹೇಳಿಕೆ ಪ್ರಕಾರ 1ನೇ ಆರೋಪಿ, ನಾನು, ಅರ್ಜುನ ಮತ್ತು ಪೋಲಿಸರು ಜೀಪಿನಲ್ಲಿ ಹೋಗಿದ್ದೇವು ಎನ್ನುವುದು ಸರಿ.

6. ಆದರ್ಶ ನಗರದ ಇನಕಮ ಟ್ಯಾಕ್ಸ ಆಫೀಸನ ಬಳಿ 1ನೇ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಕರೆದುಕೊಂಡು ಹೋದನು ಎನ್ನುವುದು ನನಗೆ ನೆನಪಿಲ್ಲ. ಮುಂದೆ ಶನಿ ದೇವರ ಮಂದಿರದ ಬಳಿ 1ನೇ ಆರೋಪಿ ನಮ್ಮನ್ನು ಕರೆದುಕೊಂಡು ಹೋದನು ಎನ್ನುವುದು ನನಗೆ ನೆನಪಿರುವುದಿಲ್ಲ. ಶನಿದೇವರ ಮಂದಿರದ ಹಿಂಭಾಗದಲ್ಲಿ 1ನೇ ಆರೋಪಿ ನಮ್ಮನ್ನು ಮತ್ತು ಪೋಲಿಸರನ್ನು ಒಂದು ಮನೆಯ ಬಳಿ ಕರೆದುಕೊಂಡು ಹೋಗಿ ಅದು ತಮ್ಮ ಮನೆ ಎಂದು ತೋರಿಸಿದನು ಎನ್ನುವುದು ನನಗೆ ಈಗ ನೆನಪಿರುವುದಿಲ್ಲ.

7. ಅಲ್ಲಿ 1ನೇ ಆರೋಪಿ ಹಿರೋ ಸ್ಪ್ಲೆಂಡರ ಮೋಟರಸೈಕಲನ್ನು ತೋರಿಸಿದನು ಎನ್ನುವುದು ಸರಿ. ಆ ಸಮಯದಲ್ಲಿ ನಿಪಿ–37 ಮತ್ತು ನಿಪಿ–38 ಫೋಟೋಗಳನ್ನು ತೆಗೆಯಲಾಯಿತು ಎನ್ನುವುದು ಸರಿ. ಅದೇ ಮೋಟರಸೈಕಲನಲ್ಲಿ ನಾವು ಸಮಾಧಿಮಠಕ್ಕೆ ಹೋಗಿ ಕೊಲೆ ಮಾಡಲು ಸಂಚು ರೂಪಿಸಿದೇವು ಎಂದು 1ನೇ ಆರೋಪಿ ಹೇಳಿದನು ಎನ್ನುವುದು ಸರಿ.

8. 1ನೇ ಆರೋಪಿ ತಮ್ಮ ಮನೆಯ ಒಳಗೆ ಕರೆದುಕೊಂಡು ಹೋಗಿ ರಕ್ತ ಆಗಿದ್ದ ಕಪ್ಪು ಬಣ್ಣದ ಒಂದು ಶರ್ಟ ಮತ್ತು ರಕ್ತ ಅಂಟಿದ್ದ ಬಿಳಿ ಮಿಶ್ರಿತ ಬೂದಿ ಬಣ್ಣದ ಜೆನ್ಸ ಪ್ಯಾಂಟನ್ನು ಮತ್ತು ಬಿಳಿ ಬಣ್ಣದ ಸಿಲ್ವರ ಕೋಟಿಂಗ ಇರುವ ಮೊಬೈಲನ್ನು ಹಾಜರುಮಾಡಿದನು ಎನ್ನುವುದು ಸರಿ.

9. ನ್ಯಾಯಾಲಯದಲ್ಲಿ ಹಾಜರುಮಾಡಿರುವ ವಸ್ತುಗಳನ್ನು ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರವರು ಮನವಿಯನ್ನು ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ, FSL ಸೀಲು ಇರುವ ಹಾಗೂ ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ತಮ್ಮ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಆ ಕಾರಣ ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಕಪ್ಪು ಬಣ್ಣದ ತುಂಬು ತೋಳಿನ ಶರ್ಟನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.12 ಎಂದು ಗುರುತಿಸಲಾಯಿತು.

10. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ, FSL ಸೀಲು ಇರುವ ಹಾಗೂ ಅದರ ಮೇಲೆ ಅಂಟಿಸಿರುವ ಚೀಟಿಯಲ್ಲಿ ಸಾಕ್ಷಿಯು ತಮ್ಮ ಸಹಿ ಇರುವುದಾಗಿ ಗುರುತಿಸಿರುತ್ತಾರೆ. ಆ ಕಾರಣ ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಬಿಳಿ ಮಿಶ್ರಿತ ಬೂದು ಬಣ್ಣದ ಜಿನ್ಸ ಪ್ಯಾಂಟನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.13 ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ನ್ಯಾಯಾಲಯದ ಮುಂಜಾನೆ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀ ಸವಾಲಿಗಾಗಿ ಮಧ್ಯಾಹ್ನದ ಅವಧಿಗೆ ಕಾಯ್ದಿರಿಸಲಾಯಿತು.**

**ಸಾಕ್ಷಿಯನ್ನು ಪುನಃ ಮಧ್ಯಾಹ್ನ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು : ವಿಶೇಷ ಸರ್ಕಾರಿ ಅಭಿಯೋಜಕರಿಂದ**

11. ದಿನಾಂಕಃ 04-04-2019 ರ ಪೋಲಿಸ ನೋಟಿಸನ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ. ಪೋಲಿಸ ನೋಟಿಸನ್ನು ನಿಪಿ-44 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ-44 [ಎ] ಎಂದು ಗುರುತಿಸಲಾಯಿತು. ನಾನು ಪೋಲಿಸ

ಠಾಣೆಗೆ ಹೋಗಿದ್ದಾಗ ಮೂರು ಜನ ಆರೋಪಿತರು ಪೋಲಿಸ ಠಾಣೆಯಲ್ಲಿದ್ದು, ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿದರು ಎನ್ನುವುದು ನನಗೆ ನೆನಪಿರುವುದಿಲ್ಲ. ನಾನು, ಮೂರು ಜನ ಆರೋಪಿತರು, ಪೋಲಿಸರು ಸಮಾಧಿಮಠದ ಹತ್ತಿರ ಬಂದು, ಆರೋಪಿತರು ಮಠದ ಹಿಂಭಾಗದಲ್ಲಿರುವ ಹಳ್ಳಕ್ಕೆ ಕರೆದುಕೊಂಡು ಹೋಗಿ ಸ್ಥಳ ತೋರಿಸಿ ನಾವು ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳ ಎಂದು ತೋರಿಸಿದ್ದು, ಆ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿದರು ಎನ್ನುವುದು ಸರಿ. ಆ ಸ್ಥಳದಲ್ಲಿ ಸಹಿ ಮಾಡಿದ ಬಗ್ಗೆ ನನಗೆ ಈಗ ನೆನಪಿರುವುದಿಲ್ಲ. ಕೊಲೆ ಮಾಡಲು ಸಂಚು ರೂಪಿಸಿದ ಸ್ಥಳದ ಪಂಚನಾಮೆಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿರುತ್ತಾರೆ. ಪಂಚನಾಮೆಯನ್ನು ನಿಪಿ–45 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–45 [ಎ] ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ನಿಪಿ–36 ರ ಪೋಟೋ ತೆಗೆಯಲಾಗಿದೆ ಎನ್ನುವುದು ಸರಿ. ನಿಪಿ–36 ರಲ್ಲಿ 2ನೇ ಆರೋಪಿ ಮತ್ತು 3ನೇ ಆರೋಪಿ ಸಹ ಕಾಣುತ್ತಾರೆ ಎಂದು ಸೂಚಿಸುವುದು ಸರಿ.

12. 3ನೇ ಆರೋಪಿ ಮೃತ ಅರವಿಂದ ಪೋಳ ಅವರ ಶವ ಸಾಗಿಸುವ ಸಮಯದಲ್ಲಿ ತಾನು ಧರಿಸಿದ ಬಟ್ಟೆ , ತನ್ನ ಮೊಬೈಲ, ಮೃತನ ಕೊರಳಿನಲ್ಲಿದ್ದ ಬಂಗಾರದ ಸರ ಮತ್ತು ಎರಡು ಉಂಗುರುಗಳನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದನು ಎನ್ನುವುದು ನನಗೆ ನೆನಪಿಲ್ಲ. 3ನೇ ಆರೋಪಿ ನನಗೆ ಹಣಬರ ಗಲ್ಲಿಯಲ್ಲಿರುವ 3ನೇ ಆರೋಪಿಯ ಮನೆಗೆ ನಮ್ಮನ್ನು ಕರೆದುಕೊಂಡು ಹೋಗಿ ಮನೆಯಲ್ಲಿರಿಸಿದಂತಹ ರಕ್ತ ಅಂಟಿದ್ದ ಒಂದು ತಿಳಿ ನೀಲಿ ಬಣ್ಣದ ಟಿ ಶರ್ಟ್ ಮತ್ತು ರಕ್ತ ಅಂಟಿದ್ದ ನೀಲಿ ಬಣ್ಣದ ಜೀನ್ಸ ಪ್ಯಾಂಟನ್ನು ಹಾಗೂ ಕಪ್ಪು ಬಣ್ಣದ ಸ್ಯಾಮಸಂಗ್ ಕಂಪನಿಯ ಮೊಬೈಲನ್ನು ಹಾಜರುಪಡಿಸಿದನು ಎನ್ನುವುದು ನನಗೆ ನೆನಪಿಲ್ಲ. ಸಾಕ್ಷಿಗೆ ಒಂದು ಪೋಟೋ ತೋರಿಸಿದ್ದು ಅದರಲ್ಲಿ ತಮ್ಮ ಇರುವಿಕೆಯನ್ನು ಮತ್ತು ಪೋಲಿಸರ ಇರುವಿಕೆಯನ್ನು ಗುರುತಿಸಿರುತ್ತಾರೆ. 3ನೇ ಆರೋಪಿ ತಮ್ಮ ಮನೆಗೆ ಕರೆದುಕೊಂಡು ಹೋಗಿ ಬಟ್ಟೆಗಳನ್ನು ಹಾಜರುಮಾಡಿದ ಸಮಯದಲ್ಲಿ ಆ ಪೋಟೋ ತೆಗೆಯಲಾಗಿದೆ ಎನ್ನುವುದು

ಸರಿ. ಫೋಟೋ ವಿದ್ಯುನ್ಮಾನ ದಾಖಲೆಯಾಗಿದ್ದು ಅದನ್ನು ಗುರುತಿಸುವಿಕೆಗೆ ಭಾರತ ಸಾಕ್ಷಾಧಿನಿಯಮ ಕಲಂ 65 ಬಿ ಅಡಿಯಲ್ಲಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದರಿಂದ ಫೋಟೋವನ್ನು ನಿಪಿ−46 ಎಂದು ಗುರುತಿಸಲಾಯಿತು.

13. 3ನೇ ಆರೋಪಿ ನಮ್ಮನ್ನು ಹಳೇ ಕಾಲದ ದೇವಸ್ಥಾನದ ಹತ್ತಿರ ಕರೆದುಕೊಂಡು ಹೋಗಿ ಅಲ್ಲಿ ಕಲ್ಲಿನ ಕೆಳಗೆ ಇರಿಸಿದ್ದ ಒಂದು ಬಿಳಿ ಕಾಗದದಲ್ಲಿ ಕೊರಳಿನ ಸರ, ಎರಡು ಕೈಬೆರಳಿನ ಉಂಗುರುಗಳನ್ನು ತೆಗೆದುಕೊಟ್ಟನು ಎನ್ನುವುದು ನನಗೆ ನೆನಪಿಲ್ಲ. ಆ ಸಮಯದಲ್ಲಿ ಚಿನ್ನ ಬೆಳ್ಳಿ ತಯಾರಕರು ಸ್ಥಳಕ್ಕೆ ಬಂದು ಸರ ಮತ್ತು ಉಂಗುರುಗಳನ್ನು ತೂಕ ಮಾಡಿದರು ಎನ್ನುವುದು ನನಗೆ ನೆನಪಿಲ್ಲ. 3ನೇ ಆರೋಪಿ ಬಂಗಾರದ ಸರ ಮತ್ತು ಉಂಗುರುಗಳನ್ನು ತೆಗೆದು ಪೋಲಿಸರಿಗೆ ಕೊಟ್ಟ ಸಮಯದಲ್ಲಿ ನಿಪಿ−34 ಮತ್ತು ನಿಪಿ−35 ಫೋಟೋಗಳನ್ನು ತೆಗೆಯಲಾಯಿತು ಎನ್ನುವುದು ಸರಿ. ಆ ರೀತಿ 3ನೇ ಆರೋಪಿ ಬಂಗಾರದ ಸರ ಮತ್ತು ಉಂಗುರುಗಳನ್ನು ಹಾಜರುಮಾಡಿದ ಸಮಯದಲ್ಲಿ ಪೋಲಿಸರು ಪಂಚನಾಮೆ ಮಾಡಿ ನನ್ನ ಸಹಿ ಪಡೆದುಕೊಂಡಿದ್ದಾರೆ ಎನ್ನುವುದು ಸರಿ. ಕೃತ್ಯ ಎಸಗುವ ಸಮಯದಲ್ಲಿ ಆರೋಪಿ ಮೈಮೇಲಿದ್ದ ಬಟ್ಟೆ ಹಾಗೂ ಕೃತ್ಯಕ್ಕೆ ಬಳಸಿದ ಮೊಬೈಲ ಹಾಗೂ ಶವದ ಮೈಮೇಲಿದ್ದ ಬಂಗಾರ ಆಭರಣಗಳ ಜಪ್ತು ಪಂಚನಾಮೆ ಮೇಲೆ ಸಾಕ್ಷಿ ತಮ್ಮ ಸಹಿ ಗುರುತಿಸಿದ್ದರಿಂದ ಪಂಚನಾಮೆಯನ್ನು ನಿಪಿ−47 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ−47[ಎ] ಎಂದು ಗುರುತಿಸಲಾಯಿತು.

14. ನನ್ನ ಸಮಕ್ಷಮವೇ ಪೋಲಿಸರು ಪಂಚನಾಮೆ ಮಾಡಿದ್ದು, ನಾನು ಪಂಚನಾಮೆಯ ವಿಷಯವನ್ನು ತಿಳಿದುಕೊಂಡು ಸಹಿ ಮಾಡಿದ್ದರೂ ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ನನಗೆ ನೆನಪಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

15. ನ್ಯಾಯಾಲಯದಲ್ಲಿ ಹಾಜರುಮಾಡಿರುವ ವಸ್ತುಗಳನ್ನು ಸಾಕ್ಷಿಯಾಗಿ ಪರಿಗಣಿಸಲು ಸರ್ಕಾರಿ ಅಭಿಯೋಜಕರವರು ಮನವಿಯನ್ನು ಮಾಡಿರುತ್ತಾರೆ. ಮನವಿಯನ್ನು ಪರಿಗಣಿಸಿ ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಪ್ಲಾಸ್ಟಿಕ ಕವರನಲ್ಲಿ ಸುತ್ತಿರುವ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ಇಂಟೆಕ್ಸ ಮೊಬೈಲನ್ನು ಗುರುತಿಸಿರುತ್ತಾರೆ, ಅದನ್ನು ಮು.ಮಾ.14 ಎಂದು ಗುರುತಿಸಲಾಯಿತು.

16. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ರಕ್ತ ಅಂಟಿರುವ ತಿಳಿ ನೀಲಿ ಬಣ್ಣದ ಟಿ ಶರ್ಟನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.15 ಎಂದು ಗುರುತಿಸಲಾಯಿತು.

17. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಬಿಳಿಯ ಬಣ್ಣದ ಬಟ್ಟೆಯಿಂದ ಸುತ್ತಿರುವ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು. ಅದರಲ್ಲಿದ್ದ ರಕ್ತ ಅಂಟಿರುವ ನೀಲಿ ಬಣ್ಣದ ಜೀನ್ಸ ಪ್ಯಾಂಟನ್ನು ಸಾಕ್ಷಿ ಗುರುತಿಸಿರುತ್ತಾರೆ, ಅದನ್ನು ಮು.ಮಾ.16 ಎಂದು ಗುರುತಿಸಲಾಯಿತು.

18. ಬಟ್ಟೆಗಳನ್ನು ಹಾಜರುಮಾಡುವ ಸಮಯದಲ್ಲಿಯೇ 3ನೇ ಆರೋಪಿ ಕಪ್ಪು ಬಣ್ಣದ ಮೊಬೈಲನ್ನು ಹಾಜರುಮಾಡಿದನು ಎನ್ನುವುದು ಸರಿ. ನ್ಯಾಯಾಲಯದಲ್ಲಿ ಹಾಜರು ಮಾಡಿರುವ ಪ್ಲಾಸ್ಟಿಕ ಕವರನಲ್ಲಿ ಸುತ್ತಿರುವ ಅದರ ಮೇಲೆ ಅಂಟಿಸಿರುವ ಚೀಟಿಯ ಮೇಲೆ ಸಾಕ್ಷಿ ತಮ್ಮ ಸಹಿಯನ್ನು ಗುರುತಿಸಿದ್ದು, ಭಾಂಗಿಯನ್ನು ತೆರೆದ ನ್ಯಾಯಾಲಯದಲ್ಲಿ ತೆರೆಯಲಾಯಿತು.

ಅದರಲ್ಲಿದ್ದ ಕಪ್ಪು ಬಣ್ಣದ ಸ್ಯಾಮಸಂಗ್ ಮೊಬೈಲನ್ನು ಗುರುತಿಸಿರುತ್ತಾರೆ, ಅದನ್ನು ಮು.ಮಾ.17 ಎಂದು ಗುರುತಿಸಲಾಯಿತು.

19. ಬಂಗಾರದ ಸರ ಮತ್ತು ಬೆರಳಿನ ಉಂಗುರಗಳನ್ನು ನೋಡಿದರೆ ಈಗ ಗುರುತಿಸಲು ಆಗುವುದಿಲ್ಲ.

20. ಕೊಲೆ ಮಾಡಲು ಸಂಚು ರೂಪಿಸಲು ಉಪಯೋಗಿಸಿದ ಮೋಟರಸೈಕಲ ಜಪ್ತು ಪಂಚನಾಮೆಯನ್ನು ನಿಪಿ–48 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ–48 [ಎ] ಎಂದು ಗುರುತಿಸಲಾಯಿತು.

**ಪಾಟೀ ಸವಾಲು: 1 ನೇ ಆರೋಪಿ ಪರ ಶ್ರೀ.ಬಿ.ಎಸ್.ಆರ್ ವಕೀಲರಿಂದ**

ನಾನು ಕೆಲಸಕ್ಕೆ ಹೋಗುವಾಗ ಪೋಲಿಸರು ನನ್ನನ್ನು ಠಾಣೆಗೆ ಕರೆಸಿ ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದು ಸೂಚಿಸುವುದು ಸರಿ. ನಾನು ಎಲ್ಲಾ ಸಹಿಗಳನ್ನು ಪೋಲಿಸ ಠಾಣೆಯಲ್ಲಿಯೇ ಮಾಡಿದ್ದೇನೆ ಎನ್ನುವುದು ಸರಿ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಸ್ತುಗಳನ್ನು ಜಪ್ತು ಮಾಡಿಲ್ಲ, ಅವರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿದ್ದೇನೆ ಎಂದು ಸೂಚಿಸುವುದು ಸರಿ. ನಿಪಿ–34 ರಿಂದ ನಿಪಿ–39 ರ ಫೋಟೋಗಳನ್ನು ಪೋಲಿಸರು ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿ. ನಿಪಿ–34 ರಿಂದ ನಿಪಿ–39 ರ ಫೋಟೋಗಳನ್ನು ಮೊದಲ ಬಾರಿಗೆ ಇಂದು ನ್ಯಾಯಾಲಯದಲ್ಲಿ ನೋಡುತ್ತಿದ್ದೇನೆ ಎನ್ನುವುದು ಸರಿ.

2. ಮು.ಮಾ.12, ಮು.ಮಾ.13, ಮು.ಮಾ.15 ಮತ್ತು ಮು.ಮಾ.16 ನ್ನು ಆ ದಿನ ನೋಡಿದ ಬಟ್ಟೆಗಳು ಇವೆಯಾ ಎಂದು ಈಗ ನೆನಪಾಗುತ್ತಿಲ್ಲ ಆದರೆ ಈ ದಿನ ನೋಡಿದ್ದೇನೆ.

3. ಚಾಸಾಃ 1 ಪ್ರಾಸಾಃ 1 ಪೋಳ ಅವರ ಮನೆಯಲ್ಲಿ ಕೆಲಸ ಮಾಡುತ್ತಿದ್ದೇನು ಎನ್ನುವುದಕ್ಕೆ ಸಾಕ್ಷಿ ನಾನು ಎಲ್ಲಾ ಕಡೆಯಲ್ಲೂ ಕೆಲಸ ಮಾಡುತ್ತಿದ್ದೇನು ಎಂದು ಹೇಳಿದ್ದಾರೆ. ಇಂದು ನಾನು ಚಾಸಾಃ 1 ಪ್ರಾಸಾಃ 1 ಪೋಳ ಅವರ ಜೊತೆಯಲ್ಲಿ ನ್ಯಾಯಾಲಯಕ್ಕೆ ಬಂದಿದ್ದೇನೆ ಎನ್ನುವುದು ಸರಿ. ನಾನು ಚಾಸಾಃ 1 ಪ್ರಾಸಾಃ1 ಪೋಳ ಅವರ ಮಾತು ಕೇಳಿ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಪಾಟೀ ಸವಾಲು: 2 ನೇ ಆರೋಪಿ ಪರ ಶ್ರೀ.ಎಲ್.ಜಿ.ಎನ್ ವಕೀಲರಿಂದ ಹಾಗೂ 3 ನೇ ಆರೋಪಿ ಪರವಾಗಿ ಶ್ರೀ.ಬಿ .ಜೆ .ಜೆ . ವಕೀಲರಿಂದ**

1 ನೇ ಆರೋಪಿತನ ಪರ ವಕೀಲರು ಮಾಡಿದ ಪಾಟೀ ಸವಾಲನ್ನು 2 ಮತ್ತು 3ನೇ ಆರೋಪಿತರ ಪರ ವಕೀಲರು ತಮ್ಮ ಪಾಟೀ ಸವಾಲು ಎಂದು ಅಳವಡಿಸಿಕೊಂಡಿರುತ್ತಾರೆ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.